**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ವಾದಿ ಪರವಾಗಿ ಶ್ರೀ JPA ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳಲ್ಲಿರುವ ಸರ್ವೆ ನಂ. 145/*/2/ಬಿ ರ ಒಂದು ಪುಟದಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-1 ಎಂದು, ದಿನಾಂಕ 27-03-1999ರ ಮಾರಾಟ ಪತ್ರದ ದೃಢಿಕೃತ ನಕಲನ್ನು ನಿಪಿ-2 ಎಂದು, ಮ್ಯೂಟೇಷನ ರೇಜಿಸ್ಟರ ಪ್ರತಿಯ ದೃಢಿಕೃತ ನಕಲನ್ನು ನಿಪಿ-3 ಎಂದು, ಮ್ಯೂಟೇಷನ ರೇಜಿಸ್ಟರ ಪ್ರತಿಗಳನ್ನು ನಿಪಿ-4 ಮತ್ತು 5 ಎಂದು, ದಿನಾಂಕ 25-01-2022ರ ಕಾನೂನುಬದ್ದ ನೋಟಿಸನ್ನು ನಿಪಿ-6 ಎಂದು, ಹತ್ತು ಅಂಚೆ ರಸೀದಿಗಳನ್ನು ನಿಪಿ-7 ರಿಂದ 16 ಎಂದು, ದಿನಾಂಕ 24-08-2022ರ ಕಾನೂನು ಬದ್ಧ ನೋಟಿಸನ್ನು ನಿಪಿ-17 ಎಂದು, ದಿನಾಂಕ 03-09-2021ರ ತಾಲ್ಲೂಕ ಪಂಚಾಯತ ಕಾರ್ಯಲಯ ಚಿಂಚೋಳಿರವರ ಪತ್ರವನ್ನು ನಿಪಿ-18 ಎಂದು, ದಿನಾಂಕ 09-12-2021ರ ಪತ್ರವನ್ನು ನಿಪಿ-19 ಎಂದು, ಇನ್ನೊಂದು ಪತ್ರವನ್ನು ನಿಪಿ-20 ಎಂದು, ದಿನಾಂಕ 24-08-2021ರ ಎರಡು ಪತ್ರಗಳನ್ನು ನಿಪಿ-21 ಮತ್ತು 22 ಎಂದು, ದಿನಾಂಕ 06-09-2022ರ ಪತ್ರವನ್ನು ನಿಪಿ-23 ಎಂದು, ದಿನಾಂಕ 06-09-2022ರ ತಹಸೀಲ್ದಾರರ ಕಛೇರಿಯ ಪತ್ರವನ್ನು ನಿಪಿ-24 ಎಂದು, ಗ್ರಾಮ ರಚನೆಯ ಅರ್ಜಿಯಿ ದೃಢಿಕೃತ ನಕಲನ್ನು ನಿಪಿ-25 ಎಂದು, ಪ್ರಸ್ತಾವನೆ ಚೆಕ್ ಲಿಸ್ಟನ ದೃಢಿಕೃತ ನಕಲನ್ನು ನಿಪಿ-26 ಎಂದು, ನಮೂನೆ 2೩ ರ ದೃಢಿಕೃತ ನಕಲನ್ನು ನಿಪಿ-27 ಎಂದು, ದಿನಾಂಕ 15-01-2022ರ ಪತ್ರವನ್ನು ನಿಪಿ-28 ಎಂದು, ಪಂಚನಾಮೆಯ ದೃಢಿಕೃತ ನಕಲನ್ನು ನಿಪಿ-29 ಎಂದು, ದಿನಾಂಕ 11-08-2022ರ ಸರ್ಕಾರದ ಆದೇಶದ ದೃಢಿಕೃತ ನಕಲನ್ನು ನಿಪಿ-30 ಎಂದು, ಕಂದಾಯ ಪ್ರಸ್ತಾವನೆ ನಕಾಶೆಯ ದೃಢಿಕೃತ ನಕಲನ್ನು ನಿಪಿ-31 ಎಂದು, ದಿನಾಂಕ 02-09-2022ರ ಸಹಾಯಕ ಆಯುಕ್ತರು, ಸೇಡಂರವರ ಪತ್ರದ ದೃಢಿಕೃತ ನಕಲನ್ನು ನಿಪಿ-32 ಎಂದು, ದಿನಾಂಕ 30-08-2022ರ ತಹಸೀಲ್ದಾರ, ಚಿಂಚೋಳಿರವರ ಪತ್ರದ ದೃಢಿಕೃತ ನಕಲನ್ನು ನಿಪಿ-33 ಎಂದು, ದಿನಾಂಕ 27-09-2022ರ ವಿಚಾರಣಾ ನೋಟಿಸನ್ನು ನಿಪಿ-34 ಎಂದು, ದಿನಾಂಕ 28-09-2022ರ ಪತ್ರದ ಪ್ರತಿಯನ್ನು ನಿಪಿ-35 ಎಂದು, ಆದೇಶ ಪುಟಗಳ ದೃಢಿಕೃತ ನಕಲನ್ನು ನಿಪಿ-36 ಎಂದು, ದಿನಾಂಕ 22-12-2022ರ ಕಾನೂನು ಬದ್ದ ನೋಟಿಸನ್ನು ನಿಪಿ-37 ಎಂದು, ಐದು ಅಂಚೆ ರಸೀದಿಗಳನ್ನು ನಿಪಿ-38 ರಿಂದ ನಿಪಿ-42 ಎಂದು, ದಿನಾಂಕ 21-02-2023ರ ಜಿಲ್ಲಾಧಿಕಾರಿಗಳ ಪತ್ರದ ಪ್ರತಿಯನ್ನು ನಿಪಿ-43 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**